ವಾರದ ಪತ್ರ

# ಜ್ಯೋತಿಷ್ಯವೆಷ್ಟು ಸಮಂಜಸ?

ಝಿ ಕನ್ನಡದ 'ಮಹರ್ಷಿ ವಾಣಿ' ಕಾರ್ಯಕ್ರಮದಲ್ಲಿ ಫೋನ್‌ನಲ್ಲಿ ಜನರ ಕಷ್ಟ ನಷ್ಟಗಳಿಗೆ, ಗುರೂಜಿ ಪರಿಹಾರ ಸೂಚಿಸುತ್ತಾರೆ. ದಿನದ ರಾಶಿ ಭವಿಷ್ಯವನ್ನು ಹೇಳುತ್ತಾರೆ. ಆದರೆ ಇವರ ಸೂಚನೆಗಳಿಂದ ಫೋನ್ ಕರೆ ಮಾಡಿದವರಿಗೆ, ಸಂಕಷ್ಟಗಳು ಎಷ್ಟು ಪರಿಹಾರವಾಗಿದೆ ಎಂದು ಯಾರೂ ಹೇಳುವುದಿಲ್ಲ. ಬದುಕಿನಲ್ಲಿ ಬರುವ ಹತ್ತಾರು ಸಮಸ್ಯೆಗಳಿಗೆ ಉತ್ತರಿಸುವ ಗುರೂಜಿಯವರು, ಭೂತ, ವರ್ತಮಾನ, ಭವಿಷ್ಯ ಎಲ್ಲವನ್ನು ತಿಳಿದವರಂತೆ ಮಾತನಾಡುತ್ತಾರೆ.

'ನಮ್ಮ ಭವಿಷ್ಯ ನಮ್ಮ ಕೈಯಲ್ಲಿಯೇ ಇದೆ' ಎಂದು ಹೇಳಿರುವ ಮಹಾನ್ ಪುರುಷರು ಇದ್ದದ್ದು ಎಲ್ಲರಿಗೂ ತಿಳಿದ ವಿಚಾರ. ಇದು ಹೇಳಿ ಕೇಳಿ ವೈಜ್ಞಾನಿಕ ಯುಗ. ಬದುಕು ನಾಗಾಲೋಟದಲ್ಲಿ ಓಡುತ್ತಿದೆ. ಹೀಗಿದ್ದೂ ಬೇರೆಯವರ ಬದುಕಿನ ಆಗುಹೋಗುಗಳ ಬಗ್ಗೆ ಭವಿಷ್ಯದ ಹೆಸರಿನಲ್ಲಿ ಪರಿಹಾರ ಸೂಚಿಸುವುದು, ಇಲ್ಲ ಸಲ್ಲದ್ದನ್ನು ಹೇಳುತ್ತಾ ಹೋಗುತ್ತಿರುವುದು ಈ ದಿನಮಾನಗಳಲ್ಲಿ ಎಷ್ಟು ಸಮಂಜಸ?

—ಶಂಕರೇಗೌಡ ತುಂಬಕೆರೆ, ಮಂಡ್ಯ

# ಹೂವು ಮುಡಿದಿರಲೇ ಬೇಕೆ?

ಇತ್ತೀಚೆಗೆ ಕೆಲವು ವಾರಗಳಿಂದ 'ಮಂಗಳಗೌರಿ ಮದುವೆ' ವೀಕ್ಷಿಸುತ್ತಿರುವೆ. ಕಥಾನಾಯಕಿ ಮಂಗಳಗೌರಿಗೆ ಕಷ್ಟಗಳ ಮೇಲೆ ಕಷ್ಟಗಳು ರೈಲು ಭೋಗಿಯಂತೆ ಬರುತ್ತಲೇ ಇವೆ. ಕಣ್ಣೀರಿನಲ್ಲೇ ಕೈತೊಳೆಯುವ ಪರಿಸ್ಥಿತಿಯಲ್ಲೇ ನೊಂದು ಬೇಯುತ್ತಿದ್ದಾಳೆ. ಇಲ್ಲಿ ಒಂದು ತಮಾಷೆ ಕಾಣುತ್ತದೆ. ಅಷ್ಟೆಲ್ಲಾ ಕಷ್ಟಗಳಿದ್ದ ನಾರಿ ಪ್ರತಿದಿನವೂ ಮೊಳಗಟ್ಟಲೆ ತಾಜಾ ಹೂವನ್ನು ಮುಡಿದಿರುತ್ತಾಳೆ. ಅದು ಹೇಗೆ? ಇದು ವಾಸ್ತವಕ್ಕೆ ಬಹುದೂರ ಅಲ್ಲವೇ? ಗಂಡನಾದವನು ತೊಂದರೆಗೀಡಾದ ಸಂದರ್ಭದಲ್ಲಿ ಮಡದಿ ಊಟ, ತಿಂಡಿ ತೊರೆದು ದುಃಖಭಾವದಲ್ಲಿರುವುದು ಸಹಜ. ಆದರೆ ಇಲ್ಲಿ ಹೂ ಮುಡಿದು ಲಕ್ಷಣವಾಗಿ ಅಲಂಕಾರ ಮಾಡಿಕೊಂಡಿರುವುದು ಅಸಹಜ ಎನಿಸುತ್ತದೆ.

—ಪತ್ತಂಗಿ ಎಸ್. ಮುರಳಿ

# ಭಾನುಮತಿಗೆ ನ್ಯಾಯ ದಕ್ಕಿಲ್ಲ

ಸ್ಟಾರ್ ಸುವರ್ಣದ 'ಮಹಾಭಾರತ' ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿದ್ದರೂ ಸೂಕ್ಷ್ಮವಾಗಿ ನೋಡಿದಾಗ ಹಲವು ಲೋಪ ದೋಷಗಳು ಎದ್ದು ಕಾಣಿಸುತ್ತವೆ. ದುರ್ಯೋಧನನ ಪತ್ನಿ ಭಾನುಮತಿಯ ಬಗ್ಗೆ ಅಷ್ಟಾಗಿ ಪ್ರಸ್ತಾಪ ಇಲ್ಲ. ಭಾನುಮತಿಯೊಡನೆ ಕರ್ಣನ ಸಲುಗೆ ನೋಡಿದರೆ ಕರ್ಣನ ಮೇಲೆ ದುರ್ಯೋಧನ ಇಟ್ಟಿರುವ ಅಪಾರ ವಿಶ್ವಾಸ ಗೊತ್ತಾಗುತ್ತದೆ. ಕರ್ಣ– ಭಾನಮತಿಯರ ಪಗಡೆ ಆಟದ ಸನ್ನಿವೇಶವನ್ನು ಮೌಲ್ಯದ ಚೌಕಟ್ಟಿನಲ್ಲಿ ಅನಾವರಣಗೊಳಿಸುವುದರಲ್ಲಿ ನಿರ್ದೇಶಕರು ಎಡವಿರುವಂತೆ ಕಾಣಬರುವುದು. ಅಲ್ಲದೆ ಕುಂತಿ, ದ್ರೌಪದಿ ಸೇರಿದಂತೆ ಬೇರೆ ಸ್ತ್ರೀ ಪಾತ್ರಗಳಂತೆ ವಿಜೃಂಭಿಸಿದಂತೆ ಭಾನುಮತಿಯ ಪಾತ್ರಕ್ಕೆ ನ್ಯಾಯ ದೊರೆತಿಲ್ಲ. ಕಥೆಗೆ ಪೂರಕವಾಗಿ ಎಳೆ ಎಳೆಯಲ್ಲೂ ಅಲ್ಪವಾಗಿರಲಿ, ಕಲ್ಪವಾಗಿರಲಿ ಪ್ರತಿಯೊಂದು ಪಾತ್ರದತ್ತಲೂ ಗಮನಹರಿಸಬೇಕು.

—ಪೂರ್ಣಿಮಾ ಮೂರ್ತಿ, ಬೆಂಗಳೂರು

# ನಿಖರತೆಗೆ ಖಾಸಗಿ ವಾಹಿನಿ ಬೇಕು

ಇತ್ತೀಚೆಗೆ ಕೆಲವರು ಖಾಸಗಿ ಸುದ್ದಿ ವಾಹಿನಿಗಳನ್ನು ಏಕೆ ಬ್ಯಾನ್ ಮಾಡಬಾರದು ಎನ್ನುತ್ತಿರುತ್ತಾರೆ. ಅಂತಹವರಿಗೆ ನನ್ನದೊಂದು ಮನವಿ. ಚಂದನದಂತಹ ಸರ್ಕಾರಿ ಸುದ್ದಿಗಳಲ್ಲಿ ಸರ್ಕಾರದ ಮಾಹಿತಿ ಮಾತ್ರ ಆಗಿರುತ್ತದೆ. ಅಲ್ಲಿ ಸ್ವತಂತ್ರ ಅಭಿವ್ಯಕ್ತಿಗೆ ಆವಕಾಶವೇ ಇರುವುದಿಲ್ಲ. ಚಂದನವಾಹಿನಿಯಲ್ಲಿ ಗಲಾಟೆ– ದೊಂಬಿಗಳ ವಿಚಾರ ನಿಖರವಾಗಿ ತಿಳಿಯುವುದೇ ಇಲ್ಲ. ಅಂತಹ ಸಂದರ್ಭದಲ್ಲಿ ಖಾಸಗಿ ವಾಹಿನಿಗಳ ದಾಖಲೆ ಇಲ್ಲದೆ ಇದ್ದರೆ, ಸರ್ಕಾರ ಆ ಪ್ರಕರಣಗಳನ್ನೇ ಮುಚ್ಚಿಹಾಕುವ ಸಾಧ್ಯತೆ ಇದೆ. ಈಗಿನ ಡ್ರಗ್ಸ್ ವಿಚಾರವನ್ನೇ ತೆಗೆದುಕೊಳ್ಳಿ. ಚಂದನ ವಾಹಿನಿಯಲ್ಲಿ ಎಷ್ಟು ನಿಖರ ಸುದ್ದಿ ಪ್ರಸಾರವಾಗಿದೆ?

—ಪ್ರಕಾಶ್ ಮಲ್ಕಿ ಒಡೆಯರ್, ಹೂವಿನಹಡಗಲಿ

# ವಿಭಿನ್ನ ಕಥೆಗಳ ತ್ರಿವೇಣಿ

ಕಲರ್ಸ್ ಕನ್ನಡದ 'ಕನ್ನಡತಿ', 'ಎನ್ನರಸಿ ರಾಧೆ', 'ಗೀತಾ' ವಿಭಿನ್ನ ನಿರೂಪಣೆಯಿಂದ ಮನಗೆದ್ದಿವೆ. 'ಕನ್ನಡತಿ'ಯಲ್ಲಿ ಸಿಇಒ ಆಗಿ ಹರ್ಷ ಪಾತ್ರಧಾರಿ ಆಕರ್ಷಕವಾಗಿ ನಟಿಸುತ್ತಿದ್ದಾರೆ. ಹಾಸ್ಯ ಕಲಾವಿದರಾಗಿ ಖ್ಯಾತಿ ಗಳಿಸಿರುವ ಸಿಹಿಕಹಿ ಚಂದ್ರು 'ಎನ್ನರಸಿ ರಾಧೆ'ಯಲ್ಲಿ ಗಂಭೀರ ಪಾತ್ರವನ್ನೂ ಮನಸೆಳೆಯುವಂತೆ ನಿರ್ವಹಿಸುತ್ತಿದ್ದಾರೆ. ಅಗಸ್ತ್ಯ ಮತ್ತು ಇಂಚರ ಪಾತ್ರಧಾರಿಗಳು ನೈಜವಾಗಿ ಮತ್ತು ಆಕರ್ಷಕವಾಗಿ ನಟಿಸುತ್ತಿದ್ದಾರೆ. 'ಗೀತಾ' ಮಧ್ಯಮವರ್ಗದ ಯುವತಿಯೊಬ್ಬಳು ಮಂತ್ರಿಯ ಸೊಸೆಯಾಗಿ ಕಠಿಣ ಸವಾಲುಗಳನ್ನು ಎದುರಿಸುವ ಪರಿ ಸ್ಫೂರ್ತಿ ತುಂಬುವ ಹಾಗಿದೆ.

—ಎಲ್. ಸುಮಂತ್, ಮಂಗನಹಳ್ಳಿ

# ಆಧುನಿಕ ಶೂರ್ಪನಕಿಯರು

ಧಾರಾವಾಹಿಗಳಿಗೆ ಕಥೆ ಹಾಗೂ ಸಂಭಾಷಣೆ ಬರೆಯುವವರಿಗೆ ಏನಾಗಿದೆ ಎಂದು ಗೊತ್ತಿಲ್ಲ. ಅವರ ಮನಸ್ಸು ಹಾಗೂ ಬುದ್ಧಿ ಅಷ್ಟು ಕಠೋರವಾಗಿದೆಯೇ ಎಂಬ ಗುಮಾನಿ ಬರುತ್ತಿದೆ.

ಟೀವಿ ಬಿಂಬಿಸುವ ಪ್ರತಿಯೊಂದು ಕಥೆಯೂ ವೀಕ್ಷಕರ ಆಯಸ್ಸನ್ನು ಕ್ಷೀಣ ಮಾಡುತ್ತಿದೆ ಎಂದು ಅನ್ನಿಸುತ್ತಿದೆ. 'ಮಂಗಳಗೌರಿ'ಯ ಅತ್ತೆ ಹಾಗೂ ಬಳ್ಳಿ, 'ಕನ್ನಡತಿ'ಯ ಸಾನ್ಯ, 'ಮೂರುಗಂಟೆ'ನ ವಿಕ್ರಂನ ದೊಡ್ಡಕ್ಕ ಹಾಗೂ ಚಿಕ್ಕಅಕ್ಕನ ಮಗಳು, 'ನನ್ನರಸಿ ರಾಧೆ'ಯಲ್ಲಿ ಒಂದಲ್ಲ ಎರೆಡಲ್ಲ ಬರೋಬ್ಬರಿ ನಾಲ್ಕು ಮಂದಿ. 'ಪಾರು'ವಿನ ಧಾಮಿನಿ ಇವರ ಸಂಭಾಷಣೆ– ಹಾವಭಾವ ವಾಕರಿಕೆ ತರಿಸುತ್ತದೆ. ಇಂತಹ ಪಾತ್ರಗಳು ಹೆಣ್ಣು ಎಂಬ ಪದಕ್ಕೆ ಶಾಪ ಎನ್ನಬಹುದು.

ಈ ಧಾರಾವಾಹಿಗಳಲ್ಲಿ ನಿತ್ಯವೂ ಇವರ ಕಿರುಕುಳ ಅರಗಿಸಿಕೊಳ್ಳುವುದು ಕಷ್ಟ. ನಾಯಕ ನಾಯಕಿಯರಿಗಿಂತ ಅವರ ಅಬ್ಬರವೇ ಜೋರು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

# ಅರ್ಥಹೀನಗಳ ಆಗರ

ಕನ್ನಡ ಕಲರ್ಸ್‌ನ 'ಗೀತಾ' ಬರೀ ಅರ್ಥಹೀನ, ಅಸಹಜ ಅಂಶಗಳಿಂದ ಕೂಡಿದೆ. ಇದಕ್ಕೆ ಪೂರಕವಾದ ಕೆಲವು ಉದಾಹರಣೆಗಳು ಇಲ್ಲಿವೆ. 'ಗೀತಾ' ಸಚಿವರ ಮನೆ ಸೊಸೆ. ಅವಳಿಗೆ ಬೇರೆ ಬಟ್ಟೆಗೆ ಗತಿ ಇಲ್ಲವೇ? ಕಳೆದ ಎರಡು ವಾರಗಳಿಂದಲೂ ಧರಿಸಿದ ಬಟ್ಟೆಯಲ್ಲೇ ಆಕೆ ಇದ್ದಾಳೆ. ಇದಕ್ಕೆ ವ್ಯತಿರಿಕ್ತವಾಗಿ ಅವಳ ಮನೆ ಸಹಾಯಕಿ ತರಹೇವಾರಿ ಸೀರೆಯಲ್ಲಿ ಮಿಂಚುತ್ತಿದ್ದಾಳೆ.

ಗೀತಾ ಎಷ್ಟೇ ದೂರ ಸೈಕಲ್ ತುಳಿದರೂ, ಎಷ್ಟೇ ಎತ್ತರದ ಕಾಂಪೌಂಡ್ ಗೋಡೆ ಜಿಗಿದು ಬಂದರೂ, ಕಟ್ಟಾಳು ಕೇಡಿಗಳೊಂದಿಗೆ ಕಾದಾಡಿದರೂ, ಆಕೆಯ ಮುಖದಲ್ಲಿ ದಣಿವು ಕಾಣದು. ಸಚಿವರೊಬ್ಬರ ಮಗ ಇರಲಿಕ್ಕೆ ಸಾಧ್ಯವೆ? ಹೀಗೆ ಸೂಕ್ಷ್ಮವಾಗಿ ನೋಡಿದರೆ ನಿರ್ದೇಶಕರು ವೀಕ್ಷಕರನ್ನು ಹೆಜ್ಜೆ ಹೆಜ್ಜೆಗೂ ಮೂರ್ಖರನ್ನಾಗಿ ಮಾಡುತ್ತಿದ್ದಾರೆ ಎಂದೆನಿಸುತ್ತದೆ.

—ಅರವಿಂದ ಜಿ. ಜೋಷಿ, ಮೈಸೂರು

# ರಾಜೀನಾಮೆಯ ಪಿಪಾಸು

ಸುದ್ದಿವಾಹಿನಿಗಳು ಯುದ್ಧ, ರಕ್ತ, ಪ್ರಳಯ ಮುನುಕುಲದ ಅಂತ್ಯವನ್ನು ನಿಖರವಾಗಿ ಮತ್ತು ನಿರಂತರವಾಗಿ ಹೇಳುತ್ತಿರುತ್ತವೆ. ಈಗ ಮಂತ್ರಿಗಳ ರಾಜೀನಾಮೆ ಸುದ್ದಿ. ಸುದ್ದಿವಾಹಿನಿಯೊಂದು ಪದೇ ಪದೇ ಮೆಘಾ ಸುದ್ದಿ ಸ್ಫೋಟ ತಮ್ಮಲ್ಲಿ ಮಾತ್ರ ಎನ್ನುವ ಕುತೂಹಲದ ತಲೆಬರಹದ ಅಡಿಯಲ್ಲಿ ಸುದ್ದಿ ಬಿತ್ತರಿಸುತ್ತಾರೆ. 'ಇಂದು ಇಂತಹ ಸಚಿವರ ರಾಜೀನಾಮೆ ಸಂಜೆಯೊಳಗೆ ಅವರು ರಾಜೀನಾಮೆ ಸಲ್ಲಿಸುತ್ತಾರೆ ಹೈಕಮಾಂಡಿನಿಂದ ದೊರೆತ ಖಚಿತ ಮಾಹಿತಿ' ಎನ್ನುತ್ತದೆ. ಅದು ಮುಖ್ಯಮಂತ್ರಿಗಳ ರಾಜೀನಾಮೆಯನ್ನೂ ಊಹಿಸಿದೆ. ಸಂಭಾವ್ಯ ಹೊಸ ಮುಖ್ಯಮಂತ್ರಿಗಳ ಪಟ್ಟಿಯನ್ನೂ ನೀಡಿದೆ. ವಿಪರ್ಯಾಸವೆಂದರೆ ಯಾವ ಮಂತ್ರಿಗಳೂ ರಾಜೀನಾಮೆ ನೀಡಿಲ್ಲ.

—ರಮಾನಂದ ಶರ್ಮಾ, ಬೆಂಗಳೂರು